ಫಾರೆಸ್ಟ್ ಇಲಾಖಾ.

ತಾರೀಖು 12ನೇ ಮಾರ್ಚಿ 1903, ಮೊಕ್ಕಾಂ ಬೆಂಗಳೂರು.

ನೆಲಮಂಗಲದ ತಾಲ್ಲೂಕು ಸೋಲದೇವನಹಳ್ಳಿ, ಗೊರವನಹಳ್ಳಿ, ಬೊಲಿಮಾರನಹಳ್ಳಿ, ಚೌಡಸಂದ್ರ ಈ ಗ್ರಾಮದ ಜಮೀನುಗಳು ಸ್ಟೇಟ್ ಫಾರೆಸ್ಟಿಗೆ ದಾಖಲ್ಮಾಡಿಕೊಳ್ಳತಕ್ಕ ಖಾಜಿ ಫಾರೆಸ್ಟ್ ಇಲಾಖೆ ಮಾರೀಫತ್ತು ಇಸ್ತಿಹಾರ ಗೆಜೆಟ್‌ನಲ್ಲಿ ಫಾಯಿಷಾಗಿ ಇದರ ವ್ಯವಸ್ಥೆ ಬಗ್ಯೆ ನಮ್ಮನ್ನು ನೇಮಕ ಮಾಡಿರುವಂತೆ 1903ನೇ ಇಸವಿ ಜನವರಿ 29ನೇ ಮುಕ್ಕಾಂ 462—4476ನೇ ನಂಬರು ನೋಟಿಫಿಕೇಷನ್ ಅನುಸರಿಸಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸೋಲದೇವನಹಳ್ಳಿ ಗ್ರಾಮದ ಸರ್ವೆ 5–12–4–6–7–8–16–17–18–9–10–11 ಗೊರವನಹಳ್ಳಿ ಗ್ರಾಮದ ಸರ್ವೆ 13–14–15–17–16 ಬೊಲಿಮಾರನಹಳ್ಳಿ ಗ್ರಾಮದ ಸರ್ವೆ 35–36–37–38–39–40 ಚೌಡಸಂದ್ರ ಗ್ರಾಮದ 22–28–20 ಈ ನಂಬರುಗಳು ಸ್ಟೇಟ್ ಫಾರೆಸ್ಟಿಗೆ ಶೇರಿಕೊಳ್ಳುವದು ಅವಶ್ಯಕವಾಗಿ ಇರುವದ್ದರಿಂದ ಫಾರಸ್ಟು ರೆಗ್ಯುಲೇಷನ್ 5ನೇ ಸೆಕ್ಷನ್ ಅನುಸರಿಸಿ ಈ ಜಮೀನುಗಳ ಯಾವ ಹಕ್ಕುದಾರಿಯನ್ನಾದರು ನಮೂದಿಸುವ ಅಥವಾ ದಾವೆಯನ್ನಾದರು ಮಾಡುವ ಪ್ರತಿ ಮನುಷ್ಯನಿಗೂ ಅಂಥಾ ಹಕ್ಕುದಾರ್ರು ಅಥವಾ ದಾವೆಯ ಸ್ವಭಾವವನ್ನು ವಿವರಿಸಿ ಇರುವ ಒಂದು ಬರಹ ಮೂಲಕವಾದ ನೋಟಸನ್ನು ಇಸ್ತಿಹಾರು ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖು ಲಾಗಾಯತು 3 ತಿಂಗಳು 15 ದಿವಸಗಳ ವಳಗಾಗಿ ನಮ್ಮಲ್ಲಿ ಹಾಜರ್ಮಾಡಬೇಕು ಅಥವಾ ಆ ಮಾಯಿದೆ ಅಂದರುವಾರು ನಮ್ಮ ರೂಬರೂಬು ಹಾಜರಾಗಿ ಬಯಾನ್ ಮಾಡಬೇಕು.

ಸ್ಟೇಟ್ ಫಾರೆಸ್ಟಿಗೆ ಸೇರೋಣದ್ದರಿಂದ ಉತ್ತರೋತ್ತರ ಜಮೀನುಗಳಲ್ಲಿ ಜನ ಮತ್ತು ದನ ಕರುಗಳು ಪ್ರವೇಶ ಮಾಡಲು ನಿರ್ಬಂಧ ಉಂಟಾಗುವದಲ್ಲದೆ ಎಲ್ಲಾ ಹಕ್ಕು ನಿವರ್ತಿಯಾಗುವದು. ಆದಕಾರಣ ಮಾಯಿದೆ ಕಳೆದುಬರುವ ತಕರಾರುಗಳನ್ನು ಅಂಗೀಕರಿಸಲ್ಪಡುವದಿಲ್ಲಾ ತಿಳಿಯುವದು.

ಮತ್ತು ಫಾರೆಸ್ಟ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ ತಿಳಿಯಪಡಿಸುವದೇನಂದರೆ —ಸ್ಟೇಟ್ ಫಾರೆಸ್ಟ್ ಆಗಿರಬೇಕೆಂದು ಮೊಕರರ್ಮಾಡುವ ಇಸ್ತಿಹಾರಿನಿಂದ ಗೊತ್ತಾಗುವ ತಾರೀಖಿಗೂ ಈ ಇಸ್ತಿಹಾರ್ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಈ ಜಮೀನ್ ಅಥವಾ ಅದರಮೇಲೆ ಯಾವ ಹಕ್ಕನ್ನಾಗಲಿ ಸರಕಾರದ ಅಪ್ಪಣೆ ಶಿವಾಯಿ ಸಂಪಾದಿಸಕೂಡದು ಮತ್ತು ಅಂಥಾ ಜಮೀನುಗಳಲ್ಲಿ ಹೊಸದಾಗಿ ಮನೆ ವಗೈರೆ ಕಟ್ಟಕೂಡದು ಎಂದು ಇದರಿಂದ ಎಲ್ಲರಿಗೂ ತಿಳಿಯಪಡಿಸಿ ಇದೆ.

ಡಿ. ಎಂ. ನರಸಿಂಗರಾವ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್ ತಾರೀಖು 24ನೇ ಮಾರ್ಚಿ 1903ನೇ ಇಸವಿ.

ಶ್ರೀನಿವಾಸಪುರದ ರೇಂಜ್ ರಾಯಲ್‌ಪಾಡ್ ಫಾರೆಸ್ಟು ಗಾರ್ಡ್ ಆಗಿ ಇದ್ದ ಹಾಲಿ ಮೃತಪಟ್ಟಿರುವ ಸುಬ್ರಹ್ಮಣ್ಯ ಎಂಬಾತನು ಕಳೆದ ನವೆಂಬರ್ ಗ.ರ್ರ ತಾರೀಖು ಲಾಗಾಯತು 27ರ ವರಿಗೆ ಈ ಇಲಾಖೆಯಲ್ಲಿ ಕೆಲಸ ಮಾಡಿದ 27 ರೋಜುಗಳ ತಲಬು ಮಾಹೆಯಾನಾ ಎಂಟು ರೂಪಾಯಿನಂತೆ ಆಗುವ 7—3—2 ಪೈ ಮೇಲ್ಕಂಡ ಸುಬ್ರಹ್ಮಣ್ಯನಿಗೆ ಪಾವತಿ ಆಗದೆ ಶ್ರೀನಿವಾಸಪುರದ ಫಾರೆಸ್ಟ್ ರೇಂಜಾಫಿಸರಲ್ಲಿ ಅಮಾನತ್ತಿನಲ್ಲಿರುತ್ತೆ. ಮೇಲ್ಕಂಡ ಮೊಬಲಗನ್ನು ಈ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಹಕ್ಕು ಇರತಕ್ಕವರು ತೆಗೆದುಕೊಂಡುಹೋಗದಿದ್ದರೆ ಸದರಿ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 20ನೇ ಮಾರ್ಚಿ 1903.

ಆಕಾವಳ್ಳಿ ನದಿಯಿಂದ ತಪ್ಪಿಸಿಕೊಂಡುಬಂದ ಬೊಂಬುಗಳ ಜಾತಿಗಳ ಪೈ+ (25) ಬೊಂಬುಗಳು ಶಿವಮೊಗ್ಗ ತಾಲ್ಲೂಕು ಬೆಂಪುರ ಮಾಗಣಿ ಡಣಾಯಿಕಪುರದ ಬಳಿ ಸಿಕ್ಕಿದ್ದದ್ದು ಈ ಗ್ರಾಮದ ಪಟೇಲನ ಸ್ವಾಧೀನದಲ್ಲಿರುತ್ತೆ. ಈ ನೋಟಿಸ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಸದರಿ ಬೊಂಬುಗಳು ಬರಬೇಕೆಂದು ಯಾವ ಮನುಷ್ಯನಾಗಲಿ ಬಾಧ್ಯತೆಯನ್ನು ಕುರಿತು ಬರಹ ಮೂಲಕವಾದ ಹೇಳಿಕೆಯನ್ನು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಲ್ಲಿ ಹಾಜರ್ಮಾಡಬೇಕು. ತಪ್ಪಿದರೆ ಸದರಿ ಮಾಲು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. 1900ನೇ ಇಸವಿ ಫಾರೆಸ್ಟ್ ರೆಗ್ಯುಲೇಷನ್ 40ನೇ ಸೆಕ್ಷನ್ ಅನುಸರಿಸಿ ಈ ನೋಟಿಸ್ ಕೊಡಲ್ಪಟ್ಟಿರುತ್ತೆ.

ಟಿ. ಜೊಕ್ಕಣ್ಣ,
ಫಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

1903ನೇ ಇಸವಿ ಮಾರ್ಚಿ ತಾರೀಖು 19ನಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ, ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಅದರ ಬಾಜಾದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ, ಕೊಂಬು ಮತ್ತು ಪಸಾರೆ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು	ಹರಾಜು ತಾರೀಖು.	ಹರಾಜು ಮಾಡಿಸುವ ಆಫಿಸರವರು.	ಸುಮಾರು ಚೌಬೀನೆ ಮೊತ್ತಾ.												ಸುಮಾರು ಪಸಾರೆ ಜಿನಸಿ ಮೊತ್ತಾ.												ಜುಮ್ಲಾ.
				ಸಾಗವಾನಿ ನಾಟು ಮತ್ತು ಜಂತಿ.		ಮನ್ನಾ ಜಾತಿ ನಾಟು ಮತ್ತು ಜಂತಿ.		ಕಾಡ ನಾಟು ಮತ್ತು ಜಂತಿ.		ಸಾಗವಾನಿ ಸರ.		ಮನ್ನಾ ಜಾತಿ ಸರ.		ಕಾಡು ಸರ.		ಆಳಲೆಕಾಯಿ.		ಅರಗು.		ಗೋಂದು.		ಜೇನ ತುಪ್ಪ.		ಜೇನು ಮ್ಯಾಣ.		ಕೊಂಬು.		
				ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಅದದು
1	ಮೈಸೂರು ಪು ಡಿಯಾರ್ಡ್	16–4–03	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	338	7231	182	3294	6	125	63	72	..	...	...	...	1169	...	..	....	16	21	16	8	14	.	8		9226
2	ನಂಜನಗೂಡು ಡಿಪೋ	20–1–03		260	2641	36	657	123	1413	...	..	....	...	..	..	...	...	...	...	...	...	...	....	...		.	.	
3	ಶ್ರೀರಂಗಪಟ್ಟಣದ ಕೋಟೆ	15–1–03		...	...		...	..	..	...	...	...	...	..	..	2255	.	216	21	...	...	...	...	..	.	..	...	

ಷರತ್ತು:—1895ನೇ ಇಸವಿ ಮಾರ್ಚಿ 10ನೇ ಮುರ್ಕ್ಕಂ 1529—R. F. 155-92ನೇ ನಂಬರು ಇಸ್ತಿಹಾರ್ ನಾಮೆಯನ್ನು 25—4—1895ನೇ ಮುರ್ಕ್ಕಂ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಿರುತ್ತೆ, ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.